**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ</u>**

**ದಿನಾಂಕ *24* ನೇ ಜುಲೈ, *2025.***

**<u>ಸಿ.ಸಿ. ನಂ.20/2022</u>**

ಪಿರ್ಯಾದುದಾರರು : ಬಿಡದಿ ಪೊಲೀಸ್ ಠಾಣೆ

**-ವಿರುದ್ಧ-**

ಆರೋಪಿ : ಅಜಯ್ ಕುಮಾರ್

* * *

**<u>ದೋಷಾರೋಪಣೆ</u>**

**ಶ್ರೀ ಲೋಕೇಶ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಅಂದರೆ,**

ಆರೋಪಿ : ಅಜಯ್ ಕುಮಾರ್ ಬಿನ್ ಮುನಿಯಪ್ಪ,
ವಯಸ್ಸು ಸುಮಾರು 29 ವರ್ಷ,
ವಾಸಃ ಬೈರಮಂಗಲ,
ಬಿಡದಿ.

**ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,**

ದಿನಾಂಕ 08.11.2021 ರಂದು ಸಂಜೆ 6:450 ಗಂಟೆಗೆ ಬಿಡದಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿಡದಿ ಟೌನ್, ಮಾರುತಿ ಲೇಔಟ್‌ನ 2 ನೇ ಕ್ರಾಸ್‌ನಲ್ಲಿ ಸಾಕ್ಷಿ 1 ರವರು ತಮ್ಮ ಮನೆಯ ಕಡೆ ನಡೆದುಕೊಂಡು ಹೋಗುತ್ತಿರುವಾಗ ಆರೋಪಿಯಾದ ನೀವು ಹಿಂದಿನಿಂದ ಬಂದು ಸಾಕ್ಷಿ 1 ರವರ ಕುತ್ತಿಗೆಯಲ್ಲಿದ್ದ ಚಿನ್ನದ ಮಾಂಗಲ್ಯದ ಸರವನ್ನು ಕಿತ್ತುಕೊಂಡು ಹೋಗಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂ 392 ರಡಿಯಲ್ಲಿ ಈ ನ್ಯಾಯಾಲಯದ

ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ಪ್ರಶ್ನೆ-1 : ದೋಷಾರೋಪಣೆ ಓದಿ ಹೇಳಿದ್ದು ಅರ್ಥವಾಯಿತೇ?

ಆರೋಪಿಯ ಉತ್ತರ :

ಪ್ರಶ್ನೆ-2: ಶಿಕ್ಷೆಗೆ ಒಪ್ಪುತ್ತೀರೋ ಅಥವಾ ನಿಮ್ಮದೇನಾದರೂ ವಿಚಾರಣೆಯಾಗಬೇಕಾ?

ಆರೋಪಿಯ ಉತ್ತರ :

ಈ ಮೇಲ್ಕಂಡ ಆಪಾದನೆಯನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ಆರೋಪಿಯ ಸಹಿ :

(ಮೇಲ್ಕಂಡ ಆರೋಪಗಳ ಸಾರಾಂಶವನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಪ್ರಶ್ನೆಗಳನ್ನು ಕೇಳಿದ್ದು ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಳ್ಳಲಾಯಿತು)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.